ಸಾಕ್ಷಿಗೆ ದಿಃ 24.02.2020 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮಧ್ಯಂತರ ಅರ್ಜಿ 17 ಮತ್ತು 18 ರ ಪುರಸ್ಕಾರದ ಮೇರೆಗೆ ಮುಂದುವರಿದ ಪಾಟಿ ಸವಾಲು 3, 4 ಮತ್ತು 5ನೇ ಪ್ರತಿವಾದಿ ಪರ ಶ್ರೀ ಹೆಚ್ ಬಿ ಐ ವಕೀಲರಿಂದಃ

ಮಲ್ಲಪ್ಪಗೌಡರ ತಂದೆ ಬಸಪ್ಪಗೌಡ. ಬಸಪ್ಪಗೌಡರಿಂದ ಮಲ್ಲಪ್ಪಗೌಡರಿಗೆ ಖಾತೆ ಬದಲಾವಣೆ ಆದ ಕುರಿತು ದಾಖಲೆಗಳು ಇರುವುದಿಲ್ಲ. ಮಲ್ಲಪ್ಪಗೌಡರ ತಂದೆ ಬಸಪ್ಪಗೌಡರು ಎಂದು ಯಾವ ಆಧಾರದ ಮೇಲೆ ಸಾಧಿಸುತ್ತೇನೆ ಎಂದರೆ ಬಸಪ್ಪಗೌಡರ ಆಸ್ತಿಗಳು ಮಲ್ಲಪ್ಪಗೌಡರಿಗೆ ಬಂದ ಕಾರಣ ಅವರು ತಂದೆ ಮಗ ಎಂದು ಹೇಳುತ್ತೇನೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಬಸಪ್ಪಗೌಡರಿಂದ ಮಲ್ಲಪ್ಪಗೌಡರಿಗೆ ಖಾತೆ ಬದಲಾವಣೆ ಆದ ಕುರಿತು ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಬಸಪ್ಪಗೌಡರಿಂದ ಮಲ್ಲಪ್ಪಗೌಡರಿಗೆ ಆಸ್ತಿ ಬಂದ ಕುರಿತು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಿಪಿ 45 ರಿಂದ 56 ರವರೆಗೆ ಬಸಪ್ಪಗೌಡರಿಂದ ಮಲ್ಲಪ್ಪಗೌಡರಿಗೆ ಆಸ್ತಿ ಬಂದ ಬಗ್ಗೆ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ಬಸಪ್ಪಗೌಡರಿಗೆ ಮಲ್ಲಪ್ಪಗೌಡ ಒಬ್ಬರೇ ಮಗ. ಬಸಪ್ಪಗೌಡರಿಗೆ ಮಲ್ಲಪ್ಪಗೌಡ ಒಬ್ಬನೇ ಮಗ ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ ಎಂದರೆ ಸಾಕ್ಷಿಯು ಬಸಪ್ಪಗೌಡರ ಎಲ್ಲಾ ಆಸ್ತಿಗಳು ಮಲ್ಲಪ್ಪಗೌಡರಿಗೆ ಬಂದಿರುವ ಕಾರಣ ಮಲ್ಲಪ್ಪಗೌಡರೇ ಬಸಪ್ಪಗೌಡರ ಒಬ್ಬನೇ ಮಗ ಎಂದು ಹೇಳುತ್ತಾರೆ. ನಿಪಿ 44 ವಂಶವೃಕ್ಷದಲ್ಲಿ ಬಸಪ್ಪಗೌಡ ಮೂಲ ಪುರುಷ ಎಂದು ನಾನು ಯಾವ ದಾಖಲೆ ಆಧರಿಸಿ ಬರೆಸಿದ್ದೇನೆ ಎಂದರೆ ಬಾಯಿ ಮಾತಿನ ಆಧಾರದ ಮೇಲೆ ಬರೆಸಿದ್ದೇನೆ. ಮಲ್ಲಪ್ಪಗೌಡರಿಗೆ 3 ಜನ ಹೆಣ್ಣುಮಕ್ಕಳು ಇದ್ದರು. ಚನ್ನಬಸಮ್ಮ ಹಿರಿಯ ಮಗಳು. ಗಂಡು ಮಕ್ಕಳು ಇರಲಿಲ್ಲ. ಚನ್ನಬಸಮ್ಮನಿಗೆ ಮೂಕಪ್ಪಗೌಡನನ್ನು ಮನೆ ಅಳಿಯನನ್ನಾಗಿ ಮಾಡಿಕೊಂಡಿದ್ದರು ಎಂದು ನಿಪಿ 44 ರಲ್ಲಿ ನಮೂದಿದೆ ಎಂದರೆ ಸರಿ. ಮೂಕಪ್ಪಗೌಡ ಯಾರು ಎಂದರೆ ಗೊತ್ತಿಲ್ಲ. ಮೂಕಪ್ಪಗೌಡ ಮನೆ ಅಳಿಯ ಆಗಿದ್ದರು ಎಂದು ನನ್ನ ಅಜ್ಜ ಶಿವನಗೌಡ ಪಾಟೀಲ್ ರಿಂದ ತಿಳಿದುಕೊಂಡಿದ್ದೇನೆ. ಮೂಕಪ್ಪಗೌಡ ಮನೆ ಅಳಿಯ ಆಗಿದ್ದರು ಎಂದು ಶಿವನಗೌಡ ಪಾಟೀಲ್ ರಿಗೆ ಹೇಗೆ ಗೊತ್ತು ಎಂದರೆ ಶಿವನಗೌಡರು ಈರಮ್ಮನ ಅಕ್ಕನ ಮಗ ಆಗಿರುವ ಕಾರಣ ಅವರಿಗೆ ವಿಚಾರ ಗೊತ್ತಿದೆ. ಈರಮ್ಮನ ಅಕ್ಕ ವೀರಬಸಮ್ಮ. ಶಿವನಗೌಡರು ವೀರಬಸಮ್ಮನ ಮಗ. ಈರಮ್ಮನನ್ನು ಗಂಗೊಳ್ಳಿಯ ವರನಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಗಂಡ ಬೇಗೆ ತೀರಿ ಹೋದ ಕಾರಣ ಈರಮ್ಮ ತಾಯಿ ಮನೆಗೆ ಬಂದು ದ್ವಾರಹಳ್ಳಿಯಲ್ಲಿ ಉಳಿದುಕೊಂಡಿರುತ್ತಾರೆ. ವೀರಬಸಮ್ಮನನ್ನು ಹೀರೂರಿನ ಚನ್ನಬಸಪ್ಪಗೌಡರಿಗೆ ವಿವಾಹ ಮಾಡಿದ್ದರು.

2. ವೀರಬಸಮ್ಮನ ಗಂಡ ಚನ್ನಬಸಪ್ಪಗೌಡ. ವೀರಬಸಮ್ಮ ಮತ್ತುಚನ್ನಬಸಪ್ಪಗೌಡ ದಂಪತಿಗಳ ಮಗನೇ ಶಿವನಗೌಡ ಪಾಟೀಲ್. ಮೂಕಪ್ಪಗೌಡ ಮಕ್ಕಳು ಎಷ್ಟು ಎಂದು ಗೊತ್ತಿಲ್ಲ. ಈರಮ್ಮನಿಗೆ ಮಕ್ಕಳಿಲ್ಲ. ಚನ್ನಬಸಪ್ಪಗೌಡ ಯಾವಾಗ ಮರಣ ಹೊಂದಿದರು ಹೇಳಲಾಗುವುದಿಲ್ಲ. ಮಲ್ಲಪ್ಪಗೌಡರಿಗೆ ವೀರಬಸಮ್ಮ ವಾರಸುದಾರರು ಎಂದರೆ ಸರಿಯಲ್ಲ. ವೀರಬಸಮ್ಮನಿಗೆ ಮದುವೆ ಮಾಡಿಕೊಟ್ಟಿರುವ ಕಾರಣ ಆಕೆಗೆ ಮಲ್ಲಪ್ಪಗೌಡರ ವಾರಸುದಾರರಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಚನ್ನಬಸಮ್ಮ, ವೀರಬಸಮ್ಮ ಮತ್ತು ಈರಮ್ಮ ಯಾವ ಯಾವ ಸಾಲಿನಲ್ಲಿ ಮರಣ ಹೊಂದಿದರು ಗೊತ್ತಿಲ್ಲ. ಚನ್ನಬಸಮ್ಮ, ವೀರಬಸಮ್ಮ ಮತ್ತು ಈರಮ್ಮ ಮಲ್ಲಪ್ಪಗೌಡರ ಮಕ್ಕಳು ಮತ್ತು ಅವರ ವಂಶಸ್ಥರು ಎಂದರೆ ಸರಿ. ಚನ್ನಪ್ಪಗೌಡ ಯಾವ ಊರಿನವರು ಎಂದು ಗೊತ್ತಿಲ್ಲ. ಚನ್ನಪ್ಪಗೌಡರ ಜನಕ ತಂದೆ ತಾಯಿ ಯಾರು ಗೊತ್ತಿಲ್ಲ. ಮಲ್ಲಪ್ಪಗೌಡರು ಚನ್ನಪ್ಪಗೌಡನನ್ನು ಯಾವಾಗ ದತ್ತು ತೆಗೆದುಕೊಂಡರು ಎಂದರೆ ಸಾಕ್ಷಿ ಬಾಯಿ ಮಾತಿನ ಮೂಲಕ

ದತ್ತು ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ಬಾಯಿ ಮಾತಿನ ದತ್ತು ಆದಾಗ ಯಾರ್ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ದತ್ತು ವಿಚಾರವನ್ನು ನನ್ನ ತಾಯಿಯ ತಂದೆ ಶಿವನಗೌಡರಿಂದ ತಿಳಿದುಕೊಂಡಿದ್ದೇನೆ. ಶಿವನಗೌಡರು ಚನ್ನಪ್ಪಗೌಡರ ಜನಕ ಮನೆತನದ ವಿಚಾರ ಮತ್ತಿತರ ವಿವರಗಳನ್ನು ತಿಳಿಸಿಲ್ಲ. ನನ್ನ ತಾಯಿಗೆ ಮನೆತನದ ವಿಚಾರದ ಬಗ್ಗೆ ಹೆಚ್ಚಿನ ಮಾಹಿತಿ ಇದೆ ಎಂದರೆ ನನ್ನ ತಾಯಿಗೂ ನನ್ನಷ್ಟೆ ವಿಚಾರ ಗೊತ್ತಿದೆ.

3. ಚನ್ನಪ್ಪಗೌಡರ ಮೊದಲ ಹೆಂಡತಿ ಸಾಲಿಬಸಮ್ಮ. ಸಾಲಿಬಸಮ್ಮನ ಊರಿನ ವಿವರ ಗೊತ್ತಿಲ್ಲ. ಚನ್ನಪ್ಪಗೌಡರ ಎರಡನೇ ಹೆಂಡತಿ ಸಾವಮ್ಮ ಮೂಗೂರಿನವರು. ಸಾವಮ್ಮನ ತಂದೆ ತಾಯಿ ವಿವರ ಗೊತ್ತಿಲ್ಲ. ಆದರೆ ಗೌಡರ ಮನೆತನದವರು. ಅವರ ಸಂಬಂಧಿಕರು ಈಗಲೂ ಮೂಗೂರಿನಲ್ಲಿ ಇದ್ದಾರೆ. ಚನ್ನಬಸಪ್ಪಗೌಡ ಯಾವ ಊರಿನವರು ಎಂದು ಗೊತ್ತಿಲ್ಲ. ಚನ್ನಬಸಪ್ಪಗೌಡರನ್ನು ಸಹ ಬಾಯಿ ಮಾತಿನ ಮೂಲಕ ದತ್ತು ತೆಗೆದುಕೊಂಡಿರುತ್ತಾರೆ. ಸಾವಮ್ಮ ಮತ್ತು ಸಾಲಿಬಸಮ್ಮ ಯಾವಾಗ ಮರಣ ಹೊಂದಿದರು ಎಂದು ನನಗೆ ಗೊತ್ತಿಲ್ಲ. ಚನ್ನಬಸಪ್ಪಗೌಡ ವಯಸ್ಕನಾದ ನಂತರ ಸಾವಮ್ಮ ಮತ್ತು ಸಾಲಿಬಸಮ್ಮ ಮರಣ ಹೊಂದಿರುತ್ತಾರೆ. ಚನ್ನಪ್ಪಗೌಡರ 2ನೇ ಹೆಂಡತಿ ಸಾವಮ್ಮ ಚನ್ನಬಸಪ್ಪಗೌಡರನ್ನು ದತ್ತು ತೆಗೆದುಕೊಂಡ ಬಗ್ಗೆ ದತ್ತು ಪತ್ರ ಅಥವಾ ಬೇರೆ ಯಾವುದೇ ದಾಖಲೆ ಇರುವುದಿಲ್ಲ. ನಿಪಿ 44 ನ್ನು ಬಾಯಿ ಮಾತಿನ ಆಧಾರದ ಮೇರೆಗೆ ಬರೆಸಲಾಗಿದೆ. ನಿಪಿ 44 ನ್ನು ನಮ್ಮ ಅಜ್ಜ ಚನ್ನಬಸಪ್ಪಗೌಡ ಬರೆಸಿದ್ದಾರೆ. ನಮ್ಮ ತಾಯಿಯ ತಂದೆ ಕಡೆಗೆ ಚನ್ನಬಸಪ್ಪಗೌಡ ನಿಪಿ 44 ನ್ನು ಕೊಟ್ಟಿದ್ದರು. ಚನ್ನಬಸಪ್ಪಗೌಡ ಯಾವಾಗ ಮರಣ ಹೊಂದಿದರು ಗೊತ್ತಿಲ್ಲ. ನಮ್ಮ ತಂದೆ ಆಗ ಇನ್ನು ಮೆಜಾರಿಟಿಗೆ ಬಂದಿರಲಿಲ್ಲ. ನಿಪಿ 44 ನ್ನು ನಾನೇ ಅರ್ಜಿ ಕೊಟ್ಟು ಬರೆಸಿದ್ದೇನೆ ಎಂದರೆ ಸರಿ. ಆದರೆ ನಮ್ಮ ಅಜ್ಜ ಬರೆಸಿಟ್ಟಿದ್ದ ದಾಖಲೆ ನೋಡಿ ನಿಪಿ 44 ನ್ನು ಬರೆಸಿದ್ದೇನೆ. ನನ್ನ ಅಜ್ಜ ಬರೆಸಿ ಇಟ್ಟಿದ್ದ ವಂಶಾವಳಿ ನಮ್ಮ ಮನೆಯಲ್ಲಿ ಇದೆ. ನ್ಯಾ.ಕ್ಕೆ ಅದನ್ನು ತೋರಿಸಬಲ್ಲೆ. ಮಲ್ಲಪ್ಪಗೌಡ ಚನ್ನಪ್ಪಗೌಡನನ್ನು ಎಂದಿಗೂ ದತ್ತು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚನ್ನಬಪ್ಪಗೌಡರ 2ನೇ ಹೆಂಡತಿ ಸಾವಮ್ಮ ಕೂಡ ಚನ್ನಬಸಪ್ಪಗೌಡರರನ್ನು ದತ್ತು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ರುದ್ರಗೌಡರಿಗೆ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ಜೋಗಿಹಳ್ಳಿಯಲ್ಲಿ ನಮ್ಮ ತಂದೆಗೆ ಸ.ನಂ. 41 ರಲ್ಲಿ 3 ಎಕರೆ 21 ಗುಂಟೆ ಆಸ್ತಿ ಇತ್ತು ಎಂದರೆ ಸರಿ. ಆದರೆ ಅದು ಟೆನೆನ್ಸಿಯಲ್ಲಿ ಹೋಗಿದೆ. ಸ.ನಂ. 41 ಮೂಲತಃ ಯಾರಿಗೆ ಸೇರಿತ್ತು ಎಂದರೆ ಅದು ಕೂಡ ಚನ್ನಬಸಪ್ಪಗೌಡ ಮೂಲ ಆಸ್ತಿ. ಅದು ಟೆನೆನ್ಸಿಯಲ್ಲಿ ತಂದೆಯ ತಂಗಿ ಗಂಡ ಬಸವನಗೌಡ ಬಿನ್ ವೀರಪ್ಪಗೌಡರಿಗೆ ಹೋಗಿದೆ ಎಂದೆರ ಸರಿ. ನನ್ನ ಚಿಕ್ಕಪ್ಪ ಚನ್ನಪ್ಪಗೌಡರು ಟ್ರಿಬ್ಯುನಲ್ ಮುಂದೆ ಒಂದು ಹೇಳಿಕೆ ಕೊಟ್ಟಿದ್ದಾರೆ ಎಂದರೆ ಸರಿ. ಸ.ನಂ. 41 ಚನ್ನಬಸಪ್ಪಗೌಡರಿಗೆ ಮೂಕಪ್ಪಗೌಡರಿಂದ ಬಂದ ಆಸ್ತಿ ಎಂದರೆ ಸರಿಯಲ್ಲ. ಚನ್ನಬಸಪ್ಪಗೌಡರ ಮಕ್ಕಳು ರುದ್ರಪ್ಪಗೌಡ ಮತ್ತು ಚನ್ನಪ್ಪಗೌಡ ಎಂದರೆ ಸರಿ. ಸ.ನಂ. 41 ರ ದಾಖಲೆ ಪ್ರಕಾರ ಚನ್ನಬಸಪ್ಪಗೌಡ ಬಿನ್ ಮೂಕಯ್ಯ ಪೌತಿ ರುದ್ರಗೌಡ ಎಂದು ಆಗಿದೆ ಎಂದರೆ ಸರಿಯಲ್ಲ. ಜೋಗಿಹಳ್ಳಿಯ ಚನ್ನಬಸಪ್ಪಗೌಡ ಬಿನ್ ಮೂಕಯ್ಯ ನನ್ನ ಅಜ್ಜ ಎಂದರೆ ಸರಿಯಲ್ಲ. ಮೂಕಯ್ಯನ ಮಗ ಚನ್ನಬಸಪ್ಪಗೌಡ ಎಂದು ನನಗೆ ತಿಳಿದಿದ್ದರೂ ಸಹ ನಾನು ಚನ್ನಬಸಪ್ಪಗೌಡ ಸಾವಮ್ಮನ ದತ್ತು ಮಗ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ. 41 ರ ದಾಖಲೆ ನಾನು ನೋಡಿಲ್ಲ. ಸ.ನಂ. 41 ರ ಕುರಿತಂತೆ ನಮ್ಮ ತಂದೆ ಸರ್ಕಾರದಿಂದ ಪರಿಹಾರ ದನ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಗಿಣಿವಾಲ ಬಸವನಗೌಡ ನನ್ನ ತಂದೆಯ ತಂಗಿ ಗಂಡ. ಸದರಿಯವರಿಗೆ ನಮ್ಮ ಕುಟುಂಬದವರು ನಮಗೆ ಆಸ್ತಿ ಭೂ ಸುಧಾರಣೆ ಕಾಯ್ದೆ ಪ್ರಕಾರ ಆಸ್ತಿ ಹೆಚ್ಚು ಆಗುತ್ತದೆ ಎಂದು ಬಸವನಗೌಡರ ಮಗ ರಮೇಶ್ ನಿಗೆ ಆಸ್ತಿ ಡಿಕ್ಲೇರ್ ಮಾಡಿರುತ್ತಾರೆ ಎಂದರೆ ಸರಿ. ಇದರ ಕುರಿತಂತೆ ನಮ್ಮ

ತಂದೆಗೂ ರಮೇಶ್ ನಿಗೂ ಒಂದು ವ್ಯಾಜ್ಯ ನಡೆಯಿತು ಎಂದರೆ ಸರಿ. ಅದರಲ್ಲಿ ನಮ್ಮ ತಂದೆ ಮತ್ತು ರಮೇಶ್ ರಾಜಿಯಾದರು ಎಂದರೆ ಸರಿ. ರಾಜಿಯಾದ ನಂತರ ಆಸ್ತಿ ವಿಲೇವಾರಿ ಕೂಡ ಮಾಡಿದ್ದಾರೆ ಎಂದರೆ ಸರಿ.

4. ಅಶೋಕ್ ನನ್ನ ಸೋದರ ಮಾವ. ಅಶೋಕ್ ಗೂ ಕೂಡ ಹೆಚ್ಚುವರಿ ಜಮೀನನ್ನು ಮಾಡಿದ್ದರು ಎಂದರೆ ಸರಿ. ಅಶೋಕನ ವಿರುದ್ಧ ಕೂಡ ನನ್ನ ತಾಯಿ 1ನೇ ಪ್ರತಿವಾದಿ ದಾವಾ ಹೂಡಿದ್ದರು ಎಂದರೆ ಸರಿ. ಎಲ್ಲಾ ವ್ಯವಹಾರವನ್ನು ನಮ್ಮ ತಂದೆಯವರೇ ಮಾಡಿರುತ್ತಾರೆ ಎಂದರೆ ಸರಿ. ಎಲ್ಲಾ ವ್ಯಾಜ್ಯಗಳು ನಮ್ಮ ತಂದೆ ರುದ್ರಪ್ಪಗೌಡ ಪಾಟೀಲ್ ಸಾಯುವ ಒಂದು ವರ್ಷ ಮುಂಚೆ ತೀರ್ಮಾನವಾಯಿತು ಎಂದರೆ ಮುಂಚೆಯೇ ಆಗಿರುತ್ತದೆ. ಹೆಚ್ಚುವರಿಯಾಗಿ ಆಸ್ತಿಗಳು ಬೇರೆಯವರಿಗೆ ಬರೆದರು ಮತ್ತು ಕುಟುಂಬದ ಆಸ್ತಿಗಳನ್ನು ಉಳಿಸಿಕೊಳ್ಳಲು ಶ್ರಮಪಟ್ಟರು ಎಂದರೆ ಸರಿಯಲ್ಲ. ವ್ಯಾಜ್ಯ ಮಾಡಿದ ಆಸ್ತಿಗಳು ಕೆಲವನ್ನು ಉಳಿಸಿಕೊಂಡರು ಕೆಲವನ್ನು ಮಾರಿದರು. ನಮ್ಮ ತಾಯಿ 1ನೇ ಪ್ರತಿವಾದಿಗೆ 1972 ನೇ ಸಾಲಿನಲ್ಲಿ ಮಲ್ಲನಗೌಡ ಬಿನ್ ರುದ್ರಪ್ಪಗೌಡ ಮತ್ತು ಚನ್ನಬಸಪ್ಪಗೌಡ ಬಿನ್ ಆರ್ ಸಿ ಪಾಟೀಲ್ ರಿಗೆ ಗಾರ್ಡಿಯನ್ ಆಗಿ ಮುಂದುವರಿದಿದ್ದರು ಎಂದರೆ ಸರಿ. ಗಾರ್ಡಿಯನ್ ಆಗಿ ನನ್ನ ತಾಯಿ ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಿ ಅದರಲ್ಲಿ 1ನೇ ಪ್ರತಿವಾದಿಯ ಸಹಿ ಇದೆ ಎಂದಾಗ ಸಾಕ್ಷಿ ಒಪ್ಪಿಕೊಳ್ಳುತ್ತಾರೆ. ಸಾಕ್ಷಿ ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಡಿ 7 ಎಂದು ಗುರುತಿಸಲಾಯಿತು. ನನ್ನ ತಾಯಿ ನಿಡಿ 7 ರಂತೆ ಚನ್ನಬಸಪ್ಪಗೌಡರ ಮೈನರ್ ಗಾರ್ಡಿಯನ್ ಆಗಿ ಆಸ್ತಿ ಮಾರಾಟ ಮಾಡಿದ ಬಗ್ಗೆ ದಾಖಲೆ ಎಂದರೆ ಸಾಕ್ಷಿ ಅಲ್ಲಗಳೆಯುತ್ತಾರೆ. 1ನೇ ಪ್ರತಿವಾದಿ ಮೈನರ್ ಗಾರ್ಡಿಯನ್ ನಾತೆಯಿಂದ ಆಸ್ತಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಮಲ್ಲನಗೌಡರ ಆಸ್ತಿಯನ್ನು ಸ್ವಲ್ಪ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಮಲ್ಲನಗೌಡರಿಗೆ ಆಸ್ತಿ ಕಡಿಮೆಯಾಯಿತು ಎಂದು ಅವರು 3ನೇ ಪ್ರತಿವಾದಿ ಹೆಸರಿಗೆ ದಾನಪತ್ರ ಮಾಡಿಕೊಟ್ಟರು ಎಂದರೆ ಸರಿಯಲ್ಲ. ಕೊನೆಕಾಲದಲ್ಲಿ ಮಲ್ಲನಗೌಡರು ಸೊಸೆಯ ಅಂದರೆ 3ನೇ ಪ್ರತಿವಾದಿಯ ಆಶ್ರಯದಲ್ಲಿ ಇದ್ದರು ಎಂದರೆ ಸರಿ 6ನೇ ಪ್ರತಿವಾದಿಯು 3ನೇ ಪ್ರತಿವಾದಿಯನ್ನು ಕರೆದುಕೊಂಡು ಹೋಗಿ ನನ್ನ ತಂದೆ ಮನೆಯಲ್ಲಿ ಇರಿಸಿಕೊಂಡಿರುತ್ತಾರೆ.

5. 3ನೇ ಪ್ರತಿವಾದಿ 4 ವರ್ಷ ನಮ್ಮ ತಂದೆ ಜೊತೆಯಲ್ಲಿದ್ದರು ಎಂದರೆ ಸರಿ. ನಮ್ಮ ತಂದೆಯ ಎಲ್ಲಾ ಯೋಗಕ್ಷೇಮವನ್ನು 3ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಪ್ರೀತಿ ವಿಶ್ವಾಸದ ಆಧಾರದ ಮೇಲೆ ನಮ್ಮ ತಂದೆ ಅವರ ಹಕ್ಕಿನ ಆಸ್ತಿಗಳನ್ನು ದಾನಪತ್ರವನ್ನು 3ನೇ ಪ್ರತಿವಾದಿಗೆ ಮಾಡಿಕೊಟ್ಟಿದ್ದಾರೆ ಎಂದರೆ ಮೋಸದಿಂದ ಮಾಡಿದ್ದಾರೆ. 09.01.2012 ರಂದು ಸ.ನಂ. 60 ರಲ್ಲಿ 6 ಎಕರೆ 02 ಗುಂಟೆ ಸ್ವತ್ತು 3ನೇ ಪ್ರತಿವಾದಿಗೆ ದಾನಪತ್ರ ಮಾಡಿಕೊಟ್ಟು ಸ್ವಾಧೀನ ಕೂಡ ವಹಿಸಿದ್ದಾರೆ ಎಂದರೆ ಮೋಸದಿಂದ ದಾನಪತ್ರ ಮಾಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ದಾನಪತ್ರದ ಆಧಾರದ ಮೇಲೆ 3ನೇ ಪ್ರತಿವಾದಿ ಆಸ್ತಿ ವಹಿವಾಟು ಮಾಡುತ್ತಿದ್ದಾರೆ ಆದರೆ ಅದು ಮೋಸದ ದಾನಪತ್ರ. ಒಂದು ವಿಲ್ಲನ್ನು ನಮ್ಮ ತಾಯಿಯ ಹೆಸರಿನಲ್ಲಿ 6 ಎಕರೆ ಆಸ್ತಿಯನ್ನು ಬರೆದಿದ್ದಾರೆ ಎಂದರೆ ಅದು ಕೂಡ ಮೋಸದ ದಾಖಲೆ. ನನ್ನ ತಾಯಿ ನಿಡಿ 4 ವಿಲ್ಲನ್ನು ಅಲ್ಲಗಳೆದಿಲ್ಲ ಎಂದರೆ ಸರಿಯಲ್ಲ. ನಿಡಿ 4 ವಿಲ್ ಮೋಸದ್ದು ಎಂದು ನನ್ನ ತಾಯಿ ತಕರಾರು ಮಾಡಿಲ್ಲ ಎಂದರೆ ಸರಿ. ನಿಡಿ 4 ರ ಆಧಾರದ ಮೇಲೆ ಖಾತೆ ಮಾಡಬಾರದು ಎಂದು ನನ್ನ ತಾಯಿ ತಕರಾರು ಮಾಡಿಲ್ಲ. ವಿಲ್ ನ ಮೂಲಕ ನನ್ನ ತಾಯಿಗೆ ಬಂದ ಆಸ್ತಿ ವರದ ನದಿ ಪಕ್ಕದಲ್ಲಿರುವ ಫಲವತ್ತಾದ ತರಿ ಜಮೀನು ಎಂದರೆ ಸರಿ. ಹೀಗಾಗಿ ನಮ್ಮ ತಾಯಿ ಇದುವರೆಗೂ ನಿಡಿ 4 ನ್ನು

ಅಲ್ಲಗಳೆದಿಲ್ಲ ಎಂದರೆ ಸರಿ. ವಿಲ್ ಬರೆದ ವಿಚಾರ ನನ್ನ ತಾಯಿಗೆ ಗೊತ್ತಿದೆ. ಇದುವರೆಗೂ ನನ್ನ ತಾಯಿ ನ್ಯಾ.ಕ್ಕೆ ನಿಡಿ 4 ರ ಬಗ್ಗೆ ತಕರಾರು ಸಲ್ಲಿಸಿಲ್ಲ ಎಂದರೆ ಸರಿ. ವಿಲ್ ಮೂಲಕ ಬಂದ ಆಸ್ತಿಗಳು ಎಕರೆಗೆ 50 ಲಕ್ಷ ರೂ ಬೆಲೆಬಾಳುವ ಕಾರಣ ನಮ್ಮ ತಾಯಿ ಇದುವರೆಗೂ ನಿಡಿ 4 ನ್ನು ಅಲ್ಲಗಳೆದಿಲ್ಲ ಎಂದರೆ ಸರಿ. ದಾವಾ ಆಸ್ತಿ ಯಾವುದು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಆರ್ ಸಿ ಪಾಟೀಲ್ ಮತ್ತು ಆತನ ಸಹೋದರರು ಸಿ ಸಿ ಪಾಟೀಲ್ ರವರ ಸ್ವಯಾರ್ಜಿತ ಆಸ್ತಿಗಳಾಗಿದ್ದು ನೊಂದಾದ ಹಿಸ್ಸೆ ಮೂಲಕ ಅದನ್ನು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪಾಲು ವಿಭಾಗ ಆದ ನಂತರ ಅವರ ಪಾಲಿಗೆ ಬಂದ ಆಸ್ತಿ ಆರ್ ಸಿ ಪಾಟೀಲ್ ರ ಸ್ವಯಾರ್ಜಿತ ಆಸ್ತಿಯಾಯಿತು ಎಂದರೆ ಸರಿಯಲ್ಲ. ಆರ್ ಸಿ ಪಾಟೀಲ್ ತಮ್ಮ ಸ್ವಯಾರ್ಜತ ಆಸ್ತಿಗಳನ್ನು ನೊಂದಾದ ಪಾಲು ವಿಭಾಗ ಪತ್ರದ ಮೂಲಕ ತಮ್ಮ ಮಕ್ಕಳಾದ ಮಲ್ಲನಗೌಡ ಮತ್ತು ಚನ್ನಬಸಪ್ಪಗೌಡರಿಗೆ ಹಿಸ್ಸೆ ಮಾಡಿಕೊಟ್ಟರು ಎಂದರೆ ಸರಿಯಲ್ಲ. ಮಲ್ಲನಗೌಡ ಮತ್ತು ಚನ್ನಬಸಪ್ಪಗೌಡರ ತಮ್ಮ ಹಿಸ್ಸೆಯನ್ನು ಇದುವರೆಗೂ ಪ್ರಶ್ನಿಸಿಲ್ಲ ಎಂದರೆ ಸರಿ. ನಮ್ಮ ತಂದೆ ಆರ್ ಸಿ ಪಾಟೀಲ್ ಅವರ ಆಸ್ತಿಗಳನ್ನು ಅನುಭವಿಸಿಕೊಂಡು ಬಂದರು ಎಂದರೆ ಸರಿ. ಆರ್ ಸಿ ಪಾಟೀಲ್ ಅವರ ಸ್ವಯಾರ್ಜಿತ ಆಸ್ತಿಗಳನ್ನು 3 ನೇ ಪ್ರತಿವಾದಿಗೆ ಮತ್ತು 6 ನೇ ಪ್ರತಿವಾದಿಗೂ ದಾನಪತ್ರದ ಮೂಲಕ ಮತ್ತು ಉಳಿದ ಆಸ್ತಿಗಳನ್ನು ವಿಲ್ ಮೂಲಕ ವಿಲೇವಾರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾದ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಅಲ್ಲದ ಕಾರಣ ನನಗೆ ಅದರಲ್ಲಿ ಹಕ್ಕಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಆರ್ ಸಿ ಪಾಟೀಲ್ 2012 ರಲ್ಲಿ ಆಸ್ಪತ್ರೆಗೆ ತೋರಿಸಿದ್ದನ್ನು ಹೊರುಪಡಿಸಿದರೇ ಹಿಂದೆ ಎಂದಿಗೂ ದೈಹಿಕ ಅಥವಾ ಮಾನಸಿಕವಾಗಿ ಆರೋಗ್ಯ ಕ್ಷೀಣಿಸಿರಲಿಲ್ಲ ಎಂದರೆ ಸರಿಯಲ್ಲ. ಆರ್ ಸಿ ಪಾಟೀಲ್ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಕಾರಣ ಮಲ್ಲನಗೌಡ ಮತ್ತು ಚನ್ನಬಸಪ್ಪಗೌಡ ಅವರನ್ನು ನೋಡಲು ಹೋಗಿದ್ದರು. ಆರ್ ಸಿ ಪಾಟೀಲ್ ರನ್ನು ಆಸ್ಪತ್ರೆಯಲ್ಲಿ ತೋರಿಸಿದ ಬಗ್ಗೆ ದಾಖಲೆ ಇದೆ. ಅದನ್ನು ನ್ಯಾ.ಕ್ಕೆ ಕೊಟ್ಟಿದ್ದೇನೆ. ಆರ್ ಸಿ ಪಾಟೀಲ್ ರನ್ನು ಸಾಗರದ ಮಾನಸಿಕ ತಜ್ಞರ ಬಳಿ ತೋರಿಸಿದ್ದಾರೆ. ವೈದ್ಯರ ಹೆಸರು ನೆನಪಿಲ್ಲ. ಮಾನಸಿಕ ತಜ್ಞರ ಬಳಿ ನಾನು ಕರೆದುಕೊಂಡು ಹೋಗಿಲ್ಲ. ನಮ್ಮ ಅಣ್ಣಂದಿರು ಕರೆದುಕೊಂಡು ಹೋಗಿದ್ದರು. ಚನ್ನಬಸಪ್ಪಗೌಡ ಈ ಪ್ರಕರಣದಲ್ಲಿ ಪ್ರತಿವಾದಿ ಇದ್ದಾರೆ ಎಂದರೆ ಸರಿ. ಅವರು ನ್ಯಾ.ಕ್ಕೆ ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದರೆ ಸರಿ. ಸಾಗರದಲ್ಲಿ ಮಾನಸಿಕ ರೋಗ ತಜ್ಞರು ಇಲ್ಲ ಎಂದರ ವಿಘ್ನೇಶ್ವರ ಆಸ್ಪತ್ರೆಗೆ ತೋರಿಸಿರುತ್ತೇವೆ. ಕೊನೆಗಾಲದಲ್ಲಿ 2012 ರಲ್ಲಿ ವಿಘ್ನೇಶ್ವರ ಆಸ್ಪತ್ರೆಗೆ ತೋರಿಸಿ ನಂತರ ಅವರನ್ನು ನಂಜಪ್ಪ ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂದರೆ ಸರಿ. ಆರ್ ಸಿ ಪಾಟೀಲ್ ರವರಿಗೆ ಸ್ಟಂಟ್ ಹಾಕಿ ಹೃದಯ ಶಸ್ತ್ರ ಚಿಕಿತ್ಸೆ ಮಾಡಿ ನಂತರ ಅಗಸಹನಳ್ಳಿ ಊರಿನಲ್ಲಿ ಬಂದು ಮನೆಯಲ್ಲಿ ಕೆಲವು ದಿನ ಇದ್ದರು. 2012 ರಲ್ಲಿ ನಂಜಪ್ಪ ಆಸ್ಪತ್ರೆಯಲ್ಲಿ ಆರ್ ಸಿ ಪಾಟೀಲ್ ಮರಣ ಹೊಂದಿರುತ್ತಾರೆ.

6. ಆಸ್ತಿ ಬೇಕು ಎಂದು 2 ನೇ ಪ್ರತಿವಾದಿ ಇದುವರೆಗೆ ಕೇಳಿಲ್ಲ ಎಂದರೆ ಅವರಿಗೆ 1972 ರಲ್ಲಿ ಕೊಟ್ಟಿದ್ದಾರೆ. 2 ನೇ ಪ್ರತಿವಾದಿ ಇದುವರೆಗೂ ಆರ್ ಸಿ ಪಾಟೀಲ್ ಮಾಡಿದ ದಾನಪತ್ರ ಮತ್ತು ವಿಲ್ಲನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಆರ್ ಸಿ ಪಾಟೀಲ್ ತಂದೆ ಚನ್ನಬಸಪ್ಪಗೌಡ ಜೋಗಿಹಳ್ಳಿಯವರು ನಮ್ಮ ಮನೆತನಕ್ಕೆ ಅಳಿತನಕ್ಕೆ ಬಂದಿದ್ದು ದತ್ತಾಗಿಲ್ಲ ಎಂದರೆ ಸರಿಯಲ್ಲ. ಅಳಿತನಕ್ಕೆ ಬಂದ ಕಾರಣ ಸ್ವತ್ತುಗಳು ಆರ್ ಸಿ ಪಾಟೀಲ್ ರಿಂದ ಸಿ ಸಿ ಪಾಟೀಲ್ ಹೆಸರಿಗೆ ಖಾತೆಯಾದವು ಎಂದರೆ ಸರಿಯಲ್ಲ. ಆಸ್ತಿಗಳನ್ನು ಟಿ ಎ ಪಿ ಎಂ ಸಿ ಯಲ್ಲಿ 17 ಲಕ್ಷ ಸಾಲ ಬಾಕಿ ಇದ್ದು ಅದನ್ನು ತೀರಿಸುವ ಸಲುವಾಗಿ ನಮ್ಮ ತಂದೆ ಆಸ್ತಿ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಟಿ ಎ ಪಿ ಎಂ ಸಿ ಯವರ ಬಳಿ ಲೇವಿ ಅಳೆಸುವ ಸಲುವಾಗಿ ಕೇಸ್ ಹಾಕಿದ್ದರು ಎಂದರೆ ಗೊತ್ತಿಲ್ಲ. ಟಿ ಎ ಪಿ ಎಂ ಸಿ ಯವರ

ಪರವಾಗಿ ಅವಾರ್ಡ್ ಆಗಿದ್ದು, ಅವಾರ್ಡಿನ ಹಣ ವಸೂಲಿ ಮಾಡಲು ಆಸ್ತಿ ಹರಾಜು ಪ್ರಕ್ರಿಯೆ ಪ್ರಾರಂಭಿಸಿದ್ದರು ಎಂದರೆ ಗೊತ್ತಿಲ್ಲ. ಹೀಗಾಗಿ ಆರ್ ಸಿ ಪಾಟೀಲ್ 7 ವರೆ ಲಕ್ಷ ರೂಗೆ ರಾಜಿ ಮಾಡಿಕೊಂಡು ಸದರಿ ಹಣ ಕಟ್ಟುವ ಸಲುವಾಗಿ ಆಸ್ತಿ ಮಾರಾಟ ಮಾಡಿದ್ದಾರೆ ಜೂಜಿಗಾಗಲಿ ಮೋಜಿಗಾಗಲಿ ಅಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಆರ್ ಸಿ ಪಾಟೀಲ್ ಮರ್ಯಾಧಸ್ಥ ವ್ಯಕ್ತಿಯಾಗಿ ಎಂ ಎಲ್ ಎ ಸ್ಪರ್ಧಿಯಾಗಿದ್ದು, ಒಳ್ಳೆಯ ಹೆಸರು ಹೊಂದಿದ್ದರು ಪ್ರಾಮಾಣಿಕರಾಗಿದ್ದರು ಎಂದರೆ ಸರಿಯಲ್ಲ. ಆರ್ ಸಿ ಪಾಟೀಲ್ ರ ವಿರುದ್ಧ ಸುಳ್ಳು ಆಪಾದನೆ ಹೊರಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ಕವಿತಾ ಪಾಟೀಲ್ ಮತ್ತು ಕುಸುಮಾ ಪಾಟೀಲ್ ಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವಾ ಹೂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಹಿಸ್ಸೆ ಇಲ್ಲ ಎಂದರೆ ಸರಿಯಲ್ಲ. ರೈಸ್ ಮಿಲ್ ಸಾಯುವರೆಗೂ ಆರ್ ಸಿ ಪಾಟೀಲ್ ರವರೇ ನಿರ್ವಹಿಸಿದ್ದಾರೆ ಎಂದರೆ ಸರಿ. ಆಡಿಟ್, ಅಕೌಂಟ್ಸ್ ಗಳನ್ನು ಆರ್ ಸಿ ಪಾಟೀಲ್ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಆರ್ ಸಿ ಪಾಟೀಲ್ ಮಾನಸಿಕವಾಗಿ ಚೆನ್ನಾಗಿದ್ದು, ಆಸ್ತಿಗಳನ್ನು ಕುಸುಮಾ ಪಾಟೀಲ್ ಗೆ ವಿಲ್ ಮಾಡಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.

ಸಮಯ ಃ 2.45 ರಿಂದ 4.45